ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆರೋಗ್ಯ ಇಲಾಖೆಯ ಬಗ್ಗೆ ಈ ಸದನದ ಸದಸ್ಯರು ಅನೇಕ ರೂಪದಲ್ಲಿ ಚರ್ಚೆ ಮಾಡಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿಯೂ ಕೂಡ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಐದು ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಇವತ್ತಿನದಿವಸ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಸಾಕಷ್ಟು ಸಮಯವೂ ಕೂಡ ಆಗಿದೆ. ಹಾಗೆಯ ಎಲ್ಲಾ ಸದಸ್ಯರುಗಳು ಬಹಳ ಆತುರದಿಂದ ಇರುವುದರಿಂದ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಆರೋಗ್ಯ ಇಲಾಖೆಯು ಉಳಿದ ಇಲಾಖೆಗಳಂತೆ ಅಲ್ಲ. ಈ ಇಲಾಖೆಯಿಂದ ಜನರಿಗೆ ಉತ್ತಮವಾದಂತಹ ಸೌಲಭ್ಯಗಳು ದೊರೆಯಬೇಕಾದರೆ ಮೂರು ತರಹದ ಸೌಲಭ್ಯಗಳನ್ನು ನಾವು ನಿರಂತರವಾಗಿ ಸಮಯಕ್ಕೆ ಸರಿಯಾಗಿ ಒದಗಿಸಬೇಕಾಗುತ್ತದೆ. ಮೊದಲನೆಯದಾಗಿ ವೈದ್ಯಕೀಯ ಸಂಸ್ಥೆಗಳಿಗೆ ಉತ್ತಮವಾದಂಥ ಕಟ್ಟಡಗಳು ಬೇಕಾಗುತ್ತದೆ. ಎರಡನೆಯದಾಗಿ ವೈದ್ಯಕೀಯ ಸಿಬ್ಬಂದಿಗಳಲ್ಲದೇ ಅರೆವೈದ್ಯಕೀಯ ಸಿಬ್ಬಂದಿಗಳ ಅವಶ್ಯಕತೆಯೂ ಕೂಡ ಬಹಳಷ್ಟು ಇದೆ. ಇನ್ನು ಮೂರನೆಯದಾಗಿ ಸಲಕರಣೆಗಳು. ಈ ಮೂರು ವ್ಯವಸ್ಥೆಗಳನ್ನು ನಾವು ಸರಿಯಾಗಿ ಒದಗಿಸಿದರೆ ನಾವು ಜನರಿಗೆ ಉತ್ತಮವಾದ ಸೇವೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾವು ಈ ಚೌಕಟ್ಟಿನಲ್ಲಿ ಪರಾಮರ್ಶೆಯನ್ನು ಮಾಡಿದಾಗ ನಾವು ಇಲಾಖೆಯಿಂದ ಯಾವ ರೀತಿಯಾಗ ವ್ಯವಸ್ಥೆಯನ್ನು ಮತ್ತು ಸೇವೆಯನ್ನು ಪಡೆಯಬಹುದೆಂದು ಮತ್ತು ಇಲ್ಲಿ ಏನು ಕೊರತೆ ಇದೆ ಎಂಬುದನ್ನು ಸಹ ನಾವು ಕಂಡುಕೊಳ್ಳಬಹುದು. ನಮ್ಮ ಸರ್ಕಾರ ಆಕ್ಟೋಬರ್ ತಿಂಗಳಲ್ಲಿ ಅಧಿಕಾರಕ್ಕೆ ಬಂದ ನಂತರ ಸಿಬ್ಬಂದಿ ಮತ್ತು ಡಾಕ್ಟರ್‌ಗಳ ಕೊರತೆ ಹಾಗೂ ಅರೆವೈದ್ಯರ ಕೊರತೆಯೂ ಸಹ ಸಾಕಷ್ಟು ಇತ್ತು. ಸನ್ಮಾನ್ಯ ಎಸ್. ಎಂ. ಕೃಷ್ಣರವರ ನೇತೃತ್ವದಲ್ಲಿರುವಂತಹ ಸರ್ಕಾರ ಬಹಳ ಅಭೂತಪೂರ್ಣವಾದ ಮತ್ತು ಮಹತ್ವವಾದ ನಿರ್ಧಾರಗಳನ್ನು ತೆಗೆದುಕೊಂಡು ಸ್ಥಳೀಯವಾಗಿ ಆಯಾಯ ಜಿಲ್ಲಾ ಮಟ್ಟದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಿದರೆ ತಕ್ಷಣ ಈ ಕೊರತೆಯನ್ನು ನೀಗಿಸಬಹುದೆಂಬ ದೃಷ್ಟಿಯಿಂದ ಡಾಕ್ಟರ್‌ಗಳಿಂದ ಹಿಡಿದ ಡ್ರೈವರ್‌ಗಳ ತನಕ ಎಲ್ಲಾ ಹುದ್ದೆಗಳನ್ನು ಜಿಲ್ಲಾ ಮಟ್ಟದಲ್ಲಿ ಭರ್ತಿಮಾಡ ಬೇಕೆಂಬ ಒಂದು ಕ್ರಾಂತಿಕಾರಕ ನಿರ್ಣಯವನ್ನು ತೆಗೆದುಕೊಂಡ ಮೇಲೆ ಈಗಾಗಲೇ ನವೆಂಬರ್ ತಿಂಗಳಿನಲ್ಲಿ 573 ಡಾಕ್ಟರ್‌ಗಳನ್ನು ಆಯ್ಕೆ ಮಾಡಿದ್ದೇವೆ. ಆದರೆ ಇದೊಂದು ರೀತಿಯಲ್ಲಿ ಬಾಲಗ್ರಹಪೀಡತ'ವಾದ ಹಾಗೆ ಕಾಣಿಸುತ್ತದೆ. ಏಕೆಂದರೆ, ನಾವು ಆಯ್ಕೆ ಏನೋ ಮಾಡಿದ್ದೇವೆ. ಆದರೆ ಮೊದಲು ಕೃಪಾಂಕದ ಸಮಸ್ಯೆ ನಮ್ಮನ್ನು ಕಾಡಿತು. ಇದು ಪರಿಹಾರವಾಗುವುದರಲ್ಲಿ ಸರ್ಟಿಫಿಕೇಟ್‌ಗಳ ವೆರಿಫಿಕೇಶನ್ ಪ್ರಾಬ್ಲಮ್ ಪ್ರಾರಂಭವಾಯಿತು. ಈ ಪ್ರಾಬ್ಲಮ್ ಮುಖ್ಯ ಹಂತದಲ್ಲಿರುವಾಗ ಈಗ ಚುನಾವಣೆ ಸನ್ನಿಹಿತವಾಗಿ ಬಂದಿದೆ. ಆದ್ದರಿಂದ ಇದು ಏನಾಗುತ್ತದೆಂದು ಕಾದು ನೋಡಬೇಕಾಗುತ್ತದೆ. ಹೀಗೆ ಒಂದಲ್ಲ ಒಂದು ಕಾರಣದಿಂದ ಈ ವೈದ್ಯರುಗಳ ನೇಮಕಾತಿಗೆ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತಿದೆ. ಇನ್ನು ಕೆಲವೇ ವಾರಗಳಲ್ಲಿ ಸುಮಾರು 700 ವೈದ್ಯರುಗಳನ್ನು ನೇಮಕ ಮಾಡಬೇಕಾಗುತ್ತದೆ. ಈಗ ಅರೆವೈದ್ಯಕೀಯ ಸಿಬ್ಬಂದಿಗಳ ಕೊರತೆ ಮತ್ತು ಸುಮಾರು 1,000ದಷ್ಟು ತಂತ್ರಜ್ಞರ ಕೊರತೆ ಇತ್ತು. ಅದು ಕೂಡ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಅತ್ಯಂತ ತೀವ್ರಗತಿಯಲ್ಲಿ ಆಯ್ಕೆ ನಡೆದಿದೆ. ಸಾಕಷ್ಟು ವಾಹನಗಳಿಗೆ ಡ್ರೈವರ್ ಗಳು ಇಲ್ಲದೇ ಇರುವುದರಿಂದ ಈಗ 500 ಡ್ರೈವರ್‌ಗಳ ನೇಮಕಾತಿಯನ್ನು ಮಾಡಲಾಗುತ್ತಿದೆ. ನಮ್ಮಲ್ಲಿ ಸಾಕಷ್ಟು ಪ್ಲ್ಯಾಂಟ್‌ಗಳಿವೆ. ಕರ್ನಾಟಕ ಹೆಲ್ತ್ ಸಿಸ್ಟಮ್

ಡೆವಲಪ್ ಮೆಂಟ್ ಗೆ ವರ್ಲ್ಡ್ ಬ್ಯಾಂಕ್ ನಿಂದ ಹಣ ಬರುತ್ತದೆ ಮತ್ತು ಸಾಕಷ್ಟು ಎಕ್ಸ್ಟ್ರಾ ಮಿಷನರಿಗಳನ್ನು ನಾವು ಕೊಂಡುಕೊಂಡಿದ್ದೇವೆ ಹಾಗೆಯೇ, ಈಗಾಗಲೇ 70 ತಂತ್ರಜ್ಞರ ನೇಮಕಾತಿಯನ್ನು ಮಾಡಲಾಗಿದೆ. ಇದೇ ರೀತಿಯಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಈ ವ್ಯವಸ್ಥೆಯನ್ನು ಪೂರ್ತಿ ಮಾಡಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದೇವೆ. ಈಗ ನಮ್ಮಲ್ಲಿ ಒಂದು ಕೊರತೆ ಇದೆ. ಅದೇನೆಂದರೆ, ಇಷ್ಟೊಂದು ವೈದ್ಯರುಗಳನ್ನು ನಾವು ನೇಮಕ ಮಾಡಿದರೂ ಕೂಡ ಪೋಸ್ಟಿಂಗ್ ನಲ್ಲಿ ಮಿಸ್ ಮ್ಯಾಚಿಂಗ್ ಆಗುತ್ತಿದೆ. ನಮ್ಮ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಪ್ರೈಮರಿ ಹೆಲ್ತ್ ಲೆವೆಲ್, ಸೆಕೆಂಡರಿ ಹೆಲ್ಪ್ ಲೆವೆಲ್ ಮತ್ತು ಟರ್ಶಿಯರಿ ಹೆಲ್ತ್ ಲೆವೆಲ್ ಎಂದು ಮೂರು ಹಂತದ ಸೇವಾ ವ್ಯವಸ್ಥೆಯನ್ನು ನಾವು ಒದಗಿಸಿ ಕೊಟ್ಟಿದ್ದೇವೆ. ತಾಲ್ಲೂಕು ಲೆವೆಲ್ ನಲ್ಲಿ ಪ್ರೈಮರಿ ಹೆಲ್ತ್ ಲೆವೆಲ್ ನ ಸಬ್ ಸೆಂಟರ್ ಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳು ಇವೆ ಹಾಗೆಯೇ ಕಮ್ಯೂನಿಟಿ ಹೆಲ್ತ್ ಸೆಂಟರ್ ಗಳು ಇವೆ. ಸೆಕೆಂಡರಿ ಲೆವೆಲ್ ನಲ್ಲಿ ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳು ಹಾಗೂ ಟರ್ಶಿಯರಿ ಮೆಡಿಕಲ್ ಕಾಲೇಜುಗಳನ್ನು ಒಳಗೊಂಡತಹ ಆಸ್ಪತ್ರೆಗಳು ಬರುತ್ತವೆ. ಇದರಲ್ಲಿಯೂ ಸಹ ಸಾಕಷ್ಟು ತೊಂದರೆಗಳಿವೆ. ತಾಲ್ಲೂಕು ಮಟ್ಟದಲ್ಲಿ ಸುಮಾರು 50ರಿಂದ 100 ಆಸ್ಪತ್ರೆಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಅಲ್ಲಿ ತಜ್ಞರುಗಳ ಕೊರತೆಯು ಬಹಳಷ್ಟು ಇದೆ ಎಂದು ಶಾಸಕರುಗಳು ಪ್ರಸ್ತಾಪ ಮಾಡುತ್ತಿದ್ದಾರೆ. ಆದ್ದರಿಂದ ಎಲ್ಲಾ ಶಾಸಕರುಗಳ ಸಹಕಾರ ಇದ್ದರೆ ನಮ್ಮಲ್ಲಿರುವ 174 ತಾಲ್ಲೂಕುಗಳಿಗೂ ತಜ್ಞರುಗಳನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಏಕೆಂದರೆ ನಮ್ಮಲ್ಲಿ ವಿಶೇಷ ಅರ್ಹತೆಯನ್ನು ಹೊಂದಿರುವಂತಹ 1,700 ತಜ್ಞರುಗಳಿದ್ದಾರೆ. ಇವರಲ್ಲಿ ಡಿಪ್ಲೊಮೊ ಅಥವಾ ಪೋಸ್ಟ್ ಗ್ರಾಜ್ಯುಯೇಷನ್ಸ್ ಹೊಂದಿರುವಂಥವರು ಇದ್ದಾರೆ. ಆದರೆ ಡಿಸ್ಟ್ರಿಬ್ಯೂಟಿ ಏಕೆ ಆಗುತ್ತಿದೆಯೆಂದರೆ, ಎಲ್ಲಾ ವೈದ್ಯರುಗಳು ಪಟ್ಟಣಕ್ಕೆ ಬರಬೇಕೆಂದು ಪ್ರಭಾವವನ್ನು ಬೀರಿ ಒಂದಲ್ಲ ಒಂದು ಒತ್ತಡವನ್ನು ತರುತ್ತಿರುವುದರಿಂದ ಸರ್ಕಾರಕ್ಕೆ ಬಹಳಷ್ಟು ತೊಂದರೆಗಳಾಗುತ್ತಿದೆ. ಆದ್ದರಿಂದ ಆಯಾಯ ತಾಲ್ಲೂಕುಗಳಿಗೆ ಉತ್ತಮವಾದ ತಜ್ಞರುಗಳನ್ನು ಆಸ್ಪತ್ರೆಗಳಿಗೆ ಒದಗಿಸಿಕೊಡಲು ಬಹಳಷ್ಟು ತೊಂದರೆಯಗಳಾಗುತ್ತಿದೆ. ಅದಕ್ಕಾಗಿ ನಾನು ಈ ಸದನದ ಎಲ್ಲಾ ಸದಸ್ಯರುಗಳಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ನನಗೆ ಸ್ವಲ್ಪ ಫ್ರೀಡಂನ್ನು ಕೊಟ್ಟರೆ ಎಲ್ಲಾ ತಾಲ್ಲೂಕುಗಳಲ್ಲಿ ಯಾವುದೇ ದೂರುಗಳು ಬರದಂತೆ ಎಲ್ಲಾ ತಜ್ಞರುಗಳನ್ನು ನಾವು ಒದಗಿಸಿಕೊಡ ಬಹುದು. ಇವತ್ತಿನದಿವಸ ನಾಲ್ಕೈದು ಉದಾಹರಣೆಗಳನ್ನು ಹೇಳುವುದಾದರೆ, ಜನರಲ್ ಮೆಡಿಕಲ್ ಡಾಕ್ಟರ್ ಗಳು ಒಂದೇ ಕಡೆ ಎರಡು-ಮೂರು ಜನರು ಇದ್ದರೆ ಮತ್ತೊಂದು ಕಡೆ ಮೂರು ಜನ ಸರ್ಜನ್ ಗಳೇ ಇರುತ್ತಾರೆ ಹಾಗೆಯೇ ಲೇಡಿ ಡಾಕ್ಟರ್ ಗಳು ಪೋಸ್ಟ್ ಗೆ ಜಂಟ್ಸ್ ಡಾಕ್ಟರ್ ಗಳು ಇರುತ್ತಾರೆ. ಹೀಗೆ ಒಂದಲ್ಲ ಒಂದು ಕೊರತೆ ಇರುವುದರಿಂದ ತಮ್ಮೆಲ್ಲರ ಸಹಕಾರದಿಂದ ಉತ್ತಮವಾದಂಥ ವ್ಯವಸ್ಥೆಯನ್ನು ಸರ್ಕಾರವು ಒದಗಿಸಿಕೊಡುವುದಕ್ಕೆ ಸಿದ್ಧವಾಗಿದೆ. ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗುಣಾತ್ಮಕವಾದ ಸೇವೆಯನ್ನು ಕೊಡುವುದಕ್ಕೋಸ್ಕರ ಒಂದು ಉತ್ತಮವಾದಂಥ ವ್ಯವಸ್ಥೆಯನ್ನು ಕೊಡುವುದಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ. ಅದಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೆಲ್ತ್ ಟಾಸ್ಕ್ ಫೋರ್ಸ್ ನ್ನು ಡಾ. ಸುದರ್ಶನ್ ರವರ ನೇತೃತ್ವದಲ್ಲಿ ನೇಮಕ ಮಾಡಿದ್ದಾರೆ. ಈಗಾಗಲೇ ಅದು ಮಧ್ಯಕಾಲೀನ ವರದಿಯನ್ನು ಸಲ್ಲಿಸಿದೆ. ಈಗ ಇದನ್ನು ಪ್ರೋಸಸ್ ಮಾಡಲಾಗುತ್ತಿದೆ. ಇನ್ನು ಕೆಲವೇ ವಾರಗಳಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಬಹುದೆಂಬುದರ ಬಗ್ಗೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡು ಆದಷ್ಟು ಬೇಗ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ತಮ್ಮ ಬಜೆಟ್

ಭಾಷಣ ದಲ್ಲಿ ಹೇಳಿದಂತೆ ನಮ್ಮಲ್ಲಿ 1600 ಪ್ರೈಮರಿ ಹೆಲ್ತ್ ಸೆಂಟರ್ಸ್‌ಗಳು ಇದೆ, ಅದರಲ್ಲಿ 1000 ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಅವುಗಳು ಸುಧಾರಿತ ರೀತಿಯಲ್ಲಿ ಕೆಲಸವನ್ನು ಮಾಡಲಿಕ್ಕೆ ಒಂದು ಮೈಕ್ರೋ ಸ್ಕೋಪ್, ನುರಿತ ತಂತ್ರಜ್ಞರನ್ನು ಮತ್ತು ಕೆಲವು ಕಡೆ ವಾಹನಗಳನ್ನು (ಜೀಪುಗಳನ್ನು) ಗ್ರಾಮಾಂತರ ಪ್ರದೇಶದಲ್ಲಿ ಉತ್ತಮವಾತಂದಹ ಹೆರಿಗೆಯ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಕೆಲವು ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ಕಟ್ಟಿಸಿದ್ದೇವೆ. ಅದರಲ್ಲೂ ಗೌರ್ನಮೆಂಟ್ ಆಫ್ ಇಂಡಿಯಾ ಪ್ಯಾಟ್ರನ್ ಪ್ರಾಥಮಿಕ ಆರೋಗ್ಯ ಘಟಕಗಳು ಏನಿವೆ, ಆ ಸಂಸ್ಥೆಗಳಲ್ಲಿರುವಂತೆ ಒಂದು ವಾಹನದ ವ್ಯವಸ್ಥೆಯನ್ನು ಮಾಡಿ ಉತ್ತಮವಾದ ಹೆರಿಗೆಯ ವ್ಯವಸ್ಥೆಯನ್ನು ಮಾಡಲಿಕ್ಕೆ ಈ ಸರ್ಕಾರವು ಬದ್ಧವಾಗಿದೆ. ಅದೇ ರೀತಿಯಾಗಿ ಕಮ್ಯೂನಿಟಿ ಹೆಲ್ತ್ ಸೆಂಟರ್ ನಮ್ಮಲ್ಲಿ 242 ಇವೆ, ನಮ್ಮಲ್ಲಿ 174 ತಾಲ್ಲೂಕುಗಳಿದ್ದರೂ ಕೂಡ ಸುಮಾರು 30 ಹಾಸಿಗೆಗಳನ್ನು ಕೊಡುತ್ತಿದ್ದೇವೆ. ಅದರಲ್ಲಿ 4 ಜನ ತಜ್ಞರು ಇರುತ್ತಾರೆ,(1) Gnereal Medicine (2) Surgery (3) Gynaecologist and Obstketricial and (4) Paeliatrics ಈ ನಾಲ್ಕು ತಜ್ಞರು ಪ್ರತಿಯೊಂದು 30 ಹಾಸಿಗೆಗಳನ್ನು ಹೊಂದಿರುವಂತಹ ಆಸ್ಪತ್ರೆಗಳಲ್ಲಿ ಲಭ್ಯವಾಗಿರುತ್ತಾರೆ. ನಮ್ಮಲ್ಲಿ 174 ತಾಲ್ಲೂಕುಗಳಿದ್ದರೂ ಕೂಡ ಈಗ 242 ಕಮ್ಯೂನಿಟಿ ಹೆಲ್ತ್ ಸೆಂಟರ್‌ಗಳು ಇವೆ, ಗ್ರಾಮಾಂತರ ಪ್ರದೇಶಗಳಲ್ಲಿ 30 ಹಾಸಿಗೆಗಳನ್ನು ಹೊಂದಿರುವಂತಹ ಆಸ್ಪತ್ರೆಗಳನ್ನು ಒದಗಿಸಿಕೊಟ್ಟಿದ್ದೇವೆ. ಅಲ್ಲಿ ವಿಶೇಷ ತಜ್ಞತೆಯನ್ನು ಹೊಂದಿರುವಂತಹ ವ್ಯಕ್ತಿಗಳು ಲಭ್ಯವಾಗುತ್ತಾರೆ. ಈ ಎಲ್ಲಾ ಆಸ್ಪತ್ರೆಗಳಲ್ಲಿ ಉತ್ತಮವಾದಂತಹ ಸೇವೆಯನ್ನು ನಾವು ಕೊಡಬೇಕಾದರೆ ಸಲಕರಣೆಗಳ ಅವಶ್ಯಕತೆ ಬಹಳ ಇರುತ್ತದೆ. ಕರ್ನಾಟಕ ಹೆಲ್ತ್ ಸಿಸ್ಟಮ್ ಡೆವಲಪ್‌ಮೆಂಟ್ ಕಾರ್ಯಕ್ರಮದಲ್ಲಿ ನಾವು ಅನೇಕ ಉಪಯುಕ್ತವಾದಂತಹ ಸಲಕರಣೆಗಳನ್ನು ಈಗಾಗಲೇ ಕೊಂಡುಕೊಂಡು ಒದಗಿಸಿದ್ದೇವೆ. ಇನ್ನು ವೈದ್ಯರ ಕೊರತೆ ಇದೆ ಕೆಲವೇ ವಾರಗಳಲ್ಲಿ ವೈದ್ಯರು ಪ್ರತಿಯೊಂದು ಆಸ್ಪತ್ರೆಗೆ ಒದಗಿಸಿಕೊಟ್ಟ ಮೇಲೆ ಉತ್ತಮವಾದಂತಹ ಸೇವೆ ಈ ಸಂಸ್ಥೆಗಳಿಂದ ದೊರೆಯುತ್ತದೆ ಎಂದು ತಿಳಿದುಕೊಂಡು ನಾನು ನಂಬಿದ್ದೇನೆ. ಈಗ ಬಹಳಷ್ಟು ಕಡೆ ಅಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರುಗಳು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಬಂದು ಕೆಲಸವನ್ನು ಮಾಡುತ್ತಿಲ್ಲ ಎಂದು ಅನೇಕ ದೂರುಗಳು ಬಂದಿದೆ. ಅದಕ್ಕಾಗಿ ಇನ್ಸ್‌ಪೆಕ್ಷನ್ ಸ್ಕ್ವಾಡ್ ಮಾಡಿದ್ದೇವೆ. ಅವರು ಪ್ರತಿ ತಿಂಗಳು ಹೈಯರ್ ಅಫೀಸರ್, ಅಡ್ಮಿನಿಸ್ಟ್ರೇಟರ್ ಪ್ರತಿಯೊಂದು ಗ್ರಾಮಾಂತರ ಪ್ರದೇಶಗಳಿಗೆ ಇರುವಂತೆ ಅವರಿಗೆ ಸೂಚನೆಯನ್ನು ಕೊಟ್ಟು ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಅಲ್ಲದೆ ಸಬ್‌ಸೆಂಟರ್ಸ್ ಎಂದು ಇರುತ್ತವೆ, ಸುಮಾರು 5,000 ಜನಸಂಖ್ಯೆಗೆ ಸುಮಾರು 6,000ಸಬ್ ಸೆಂಟರ್‌ಗಳು ಇದ್ದು ತಿಂಗಳಿಗೆ ಒಂದು ಸಲವಾದರೂ ಕೂಡ ಭೇಟಿ ಕೊಟ್ಟು ಅಲ್ಲಿರತಕ್ಕಂತಹ ವ್ಯವಸ್ಥೆಯ ಬಗ್ಗೆಯೂ ಕೂಡ ಅವರು ರಿವ್ಯೂ ಮಾಡಿ ಉತ್ತಮವಾದಂ ತಹ ಸೇವೆಯು ದೊರೆಯುವಂತಹ ರೀತಿಯಲ್ಲಿ ಈಒಂದು ಜಾಲವನ್ನು ನಿರ್ಮಾಣ ಮಾಡಿ ಈ ಒಂದು ಉತ್ತಮವಾದಂತಹ ವ್ಯವಸ್ಥೆಯನ್ನು ಒದಗಿಸಿಕೊಡಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಆಡಿಟ್ ಸಿಸ್ಟಮ್‌ನ್ನು ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿಯೂ ಕೂಡ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿಯೂ ಮಾಡುತ್ತಿದ್ದೇವೆ, ಆದರೆ ಸಣ್ಣ ಸಂಸ್ಥೆಗಳಲ್ಲಿ ಅಂದರೆ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಮತ್ತು ಕಮ್ಯೂನಿಟಿ ಹೆಲ್ತ್ ಸೆಂಟರ್‌ಗಳಲ್ಲಿ ಆಡಿಟ್ ಸಿಸ್ಟಮ್‌ಗಳು ಇಲ್ಲ. ಈಗಾಗಲೇ ಪ್ರಸ್ತಾವಿಕವಾಗಿ ನಮ್ಮ ಅಧಿಕಾರಿಗಳಿಗೆ ಈಗಾಗಲೇ ಹೇಳಿದ್ದೇನೆ, ಚಾರ್ಟರ್ಡ್ ಅಕೌಂಟೆಂಟ್‌ರವರ ಜೊತೆ ಸಮಾಲೋಚನೆಯನ್ನು ನಡೆಸಿದ್ದಾರೆ. ನಮ್ಮಲ್ಲಿರುವಂತಹ 1,600 ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಆಡಿಟ್ ಮಾಡಿ ಅವರಿಗೆ ಯಾವ

ಯಾವ ಕೆಲಸಗಳನ್ನು ಕೊಟ್ಟಿದ್ದೇವೆ. ಅವರು ಯಾವ ಯಾವ ಕೆಲಸಗಳನ್ನು ಮಾಡಿಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ರಿಪೋರ್ಟ್ ಬರುವುದಕ್ಕೆ ಸಾಧ್ಯವಾಗುತ್ತದೆ. ನಮಗೆ ಉತ್ತಮವಾದಂತಹ ವ್ಯವಸ್ಥೆಯನ್ನು ಮಾಡುವುದಕ್ಕೂ ಸಹ ಸಾಧ್ಯವಾಗುತ್ತದೆ. ಕಂಪ್ಯೂಟರೈಜೇಷನ್, ಮಾಹಿತಿ ಜಾಲವನ್ನು ನಾವು ನಿರ್ಮಾಣ ಮಾಡಿ ಸೆಕ್ರೆಟೇರಿಯೇಟ್ ಮತ್ತು ಡೈರೆಕ್ಟರೇಟ್ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲೂ ಕೂಡ ಈ ಗಣಕೀಕರಣವನ್ನು ಮಾಡಿ ಉತ್ತಮವಾದ ಮಾಹಿತಿಯನ್ನು ಸಂಗ್ರಹಣೆ ಮಾಡಿ ಸೇವಾ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಹೀಗೆ ಅನೇಕ ರೀತಿಯಿಂದ ಸುಧಾರಿತ ಕ್ರಮಗಳನ್ನು ಕೈಗೊಂಡು ಉತ್ತಮವಾದಂತಹ ಸೇವೆಯನ್ನು ಒದಗಿಸಿಕೊಂಡು ಸರ್ಕಾರವು ಆ ಕಾರ್ಯ ಕ್ರಮಗಳನ್ನು ಕೈಗೊಂಡಿದೆ. ಈ ರೀತಿಯ ಸೂಚನೆ ನಮ್ಮ ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಮುಂಜಾನೆ ನಮ್ಮ ಎಲ್ಲಾ ಸದಸ್ಯರು ಬೆಳಿಗ್ಗೆ 10-00 ಗಂಟೆಯಿಂದ ಸದನದಲ್ಲಿ ಕುಳಿತಿದ್ದಾರೆ, ಅವರುಗಳು ಬಹಳ ಆತುರ ಮಾಡುತ್ತಿದ್ದಾರೆ, ಈ ಆರೋಗ್ಯ ಇಲಾಖೆಯ ಬಗ್ಗೆ ಈಗಾಗಲೇ ನಾನು ಹೇಳಿದಂತೆ ಅನೇಕ ಸಾರಿ ಪ್ರಶ್ನೋತ್ತರಗಳ ಸಮಯದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಇನ್ನು ಮುಂದೆಯೂ ಕೂಡ ನಾವು ಮಾಡುವವರಿದ್ದೇವೆ, ಇಷ್ಟು ಮಾತನ್ನು ಹೇಳಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಬೇಡಿಕೆಗೆ ಸಂಬಂಧಪಟ್ಟಂತೆ ಏನು ಬೇಡಿಕೆಗೆ ಸಂಬಂಧಪಟ್ಟಂತೆ ಏನು ಬೇಡಿಕೆಗಳು ಇವೆ ಅವುಗಳಿಗೆ ಅನುಮತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಡಾ॥ ಜಿ. ಡಿ. ನಾರಾಯಣಪ್ಪ (ಹೊಸನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಇಲ್ಲಿಯವರೆಗೂ ತಮ್ಮ ಬೇಡಿಕೆಗಳ ಮೇಲೆ ಹಲವಾರು ವಿಷಯಗಳನ್ನು ತಿಳಿಸಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಕೆಲವು ಕೊರತೆಗಳು ಇವೆ ಅವುಗಳನ್ನು ಸರಿಪಡಿಸಬೇಕೆಂದು ಮೊದಲೇ ಹೇಳಿದ್ದಾರೆ. ಕಟ್ಟಡಗಳು ಸ್ಟಾಫ್ ವೈದ್ಯಕೀಯ ಸಲಕರಣೆಗಳು, ನಿಜವಾಗಿಯೂ ಅವುಗಳ ಕೊರತೆ ಇದೆ. ನಮ್ಮ ಆರೋಗ್ಯ ಇಲಾಖೆಯ ಬಗ್ಗೆ ಬಹಳಷ್ಟು ಮೆಚ್ಚುಗೆ ಏನೂ ಇಲ್ಲ, ಎಲ್ಲ ಕಡೆಯೂ ಇದರ ಬಗ್ಗೆ ದೂರತಕ್ಕಂತಹ ಪರಿಸ್ಥಿತಿಯೇ ಬಂದಿದೆ. ಏಕೆಂದರೆ ಮೊದಲನೆಯದಾಗಿ ಈ ದೂರಿಗೆ ಕಾರಣವೆಂದರೆ, ನಮ್ಮ ಇಲಾಖೆಯಂತೇನು ಅಲ್ಲ, ಪ್ರತಿಯೊಂದು ಇಲಾಖೆ ಮತ್ತು ಕಸುಬಿನಲ್ಲಿಯೂ ಬರಬಹುದೆಂದು ಕಾಣಿಸುತ್ತದೆ, ಇದರಲ್ಲಿ ನಾವು ಮೊದಲನೆಯ ತಪ್ಪುಗಾರರಾಗಿದ್ದೇವೆ. ನಾವು ಸರಿಯಾಗಿದ್ದರೆ ನಮ್ಮ ಮೇಲೆ ದೂರುಗಳು ಬರುತ್ತಿರಲಿಲ್ಲ ಎನ್ನುವಂತಹ ಭಾವನೆ ಬರುತ್ತದೆ. ನಾನು ಸುಮಾರು 25 ವರ್ಷಗಳ ಕಾಲ ಸರ್ಕಾರಿ ಸೇವೆಯನ್ನು ಮಾಡಿ ಬಂದಿರುವವನಾಗಿದ್ದೇನೆ. ನಾವು ನಮ್ಮ ತಪ್ಪಿನಿಂದ ಕೆಟ್ಟ ಹೆಸರನ್ನು ತಗೆದುಕೊಳ್ಳುತ್ತಿದ್ದೇವೆ, ಸುಮಾರು 50-60 ಭಾಗ ನಾವು ತಪ್ಪು ಮಾಡಿ ನಮ್ಮ ಇಲಾಖೆಗೆ ಕೆಟ್ಟ ಹೆಸರು ಬರುವಂತಹ ಪರಿಸ್ಥಿತಿ ಇದೆ. ಉಳಿದರಲ್ಲಿ ತಪ್ಪುಗಳು ಏಕೆ ಬರುತ್ತಿದೆ ಎಂದರೆ, ಇದರಲ್ಲಿ ಸರ್ಕಾರದ ಕೆಲವು ವೈಫಲ್ಯಗಳಿರಬಹುದು, ಸಾರ್ವಜನಿಕರ ಅಸಹಕಾರ, ನಮ್ಮ ದೇಶದ ಪರಿಸ್ಥಿತಿಯಲ್ಲಿ ಈ ರಾಜಕೀಯ ಪ್ರವೇಶ ಇವುಗಳೆಲ್ಲಾ ಆಗಿ ಕೆಟ್ಟ ಹೆಸರುಗಳು ಬರುತ್ತಿದೆ. ಒಳ್ಳೆಯ ಅಭಿಪ್ರಾಯಗಳಿಲ್ಲ ಎನ್ನುವ ಭಾವನೆ ಇದೆ. ಆದ್ದರಿಂದ ಈಗ ಮೊದಲನೆಯದಾಗಿ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗುತ್ತಿಲ್ಲ ಎನ್ನುವಂತಹ ಭಾವನೆಗಳು ಇದೆ, ಏಕೆಂದರೆ ಹಳ್ಳಿಗಳಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಅನುಕೂಲತೆಗಳು ಇಲ್ಲ. ಅದನ್ನು ಮಾಡಿಕೊಡಬೇಕು. ಇದರ ಜೊತೆಗೆ ಸಿಬ್ಬಂದಿಗಳ ಕೊರತೆ ಇದ್ದು ಅದನ್ನು ತುಂಬಿ ಕೊಡಬೇಕು, ಹಾಗಾದಾಗ ಮಾತ್ರ ಎಲ್ಲಾ ಕೆಲಸಕಾರ್ಯಗಳು

ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದು ವೈದ್ಯರ ಕೊರತೆಯಿರಬಹುದು, ಉಳಿದ ಸಿಬ್ಬಂದಿಗಳ ಕೊರತೆ ಇರಬಹುದು, ಪ್ಯಾರಾ ಮೆಡಿಕಲ್ ಸ್ಟಾಫ್ ಇರಬಹುದು, ಅವುಗಳ ಕೊರತೆಯಿರವುದರಿಂದ ತಮ್ಮಮುಖಾಂತರ ಇಲಾಖೆಗೆ ನಾನು ಕೇಳಿಕೊಳ್ಳುತ್ತೇನೆ, ಆ ಕೊರತೆಗಳನ್ನು ತಾವು ಆದಷ್ಟು ಬೇಗ ನೀಗಿಸಬೇಕು. ಇದರ ಜೊತೆಗೆ ಇನ್ನೊಂದು ವಿಚಾರವೆಂದರೆ, ನಮ್ಮ ವೈದ್ಯಕೀಯ ಇಲಾಖೆಯು ಜಿಲ್ಲಾ ಪಂಚಾಯಿತಿಯಿಂದ ಹೊರಗಡೆ ಬಂದೆ ಬಹಳ ಉತ್ತಮವೆಂದು ನನ್ನ ಭಾವನೆಯಾಗಿದೆ. ಏಕೆಂದರೆ ಅಲ್ಲಿ ದಿನೆದಿನೇ ವೈದ್ಯರಿಗೆ ಚಿಕಿತ್ಸೆಯನ್ನು ಕೊಡಬೇಕಾದರೆ ಹಲವಾರು ತರಹದ ಒತ್ತಡಗಳು ಬರುತ್ತವೆ. ಅಲ್ಲಿ ಯಾವ ರೀತಿಯಾದ ಒತ್ತಡಗಳು ಬರುತ್ತದೆ ಎಂದು ನನಗೆ ಸ್ವಂತ ಅನುಭವವಾಗಿದೆ. ಈ ರೀತಿಯಾಗಿ ಒತ್ತಡಗಳು ಬಂದಾಗ ಅವರು ಚಿಕಿತ್ಸೆಯನ್ನು ಕೊಡುವಂತಹ ಕ್ರಮವು ಸಹ ತಪ್ಪಿಹೋಗುವಂತಹ ಸಂದರ್ಭ ಇದೆ. ಇದರ ಬಗ್ಗೆ ಸುಧೀರ್ಘವಾಗಿ ವಿಚಾರಗಳನ್ನು ಹೇಳಬಹುದು ಸಮಯದ ಅಭಾವವಿರುವುದರಿಂದ ಎಲ್ಲವನ್ನೂ ಹೇಳಲು ಹೋಗುವುದಿಲ್ಲ ನನ್ನ ಒಂದು ಬೇಡಿಕೆ ಎಂದರೆ, ಜಿಲ್ಲಾ ಪಂಚಾತಿಯಿಂದ ಈ ಇಲಾಖೆಯು ಕೈತಪ್ಪಿಹೋಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟ ಸೌಲಭ್ಯಗಳನ್ನು ಒದಗಿಸಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಬಹಳಷ್ಟು ಹೇಳಿದರು, ತಮ್ಮ ಸಹಕಾರವಿದ್ದರೆ. ನಾನು ಇನ್ನು ಈ ಇಲಾಖೆಯನ್ನು ಸುಧಾರಣೆಯನ್ನು ಮಾಡುತ್ತೇನೆಂದು ಬಹಳ ಒಳ್ಳೆಯ ಮಾತನ್ನು ಹೇಳಿದರು ಇದರಲ್ಲಿ ಎಲ್ಲರ ಸಹಕಾರವು ಬೇಕಾಗಿದೆ. ಇಲ್ಲಿ ಹೆಚ್ಚಾಗಿ ರಾಜಕೀಯ ಪ್ರವೇಶವಾಗಿ ಈ ಇಲಾಖೆಗಳು ಹಾಳಾಗುತ್ತಿದೆ, ಅದರಲ್ಲೂ ಈ ಇಲಾಖೆಗೆ ದಯಮಾಡಿ ಮಾನ್ಯ ಮಿತ್ರ ಸದಸ್ಯರಲ್ಲಿ ವಿನಂತಿಸುತ್ತೇನೆ ಎಲ್ಲರೂ ಸಿಟಿಗೆ ಹೋಗಬೇಕು ಅ ತರಹದ ಒತ್ತಡವನ್ನು ತಾವು ತರದಿದ್ದರೆ ಬಹಳಷ್ಟು ಒಳ್ಳೆಯದು ಎನ್ನತಕ್ಕಂತಹ ವಿಚಾರ ಮತ್ತು ಸೀನಿಯರ್-ಜ್ಯೂನಿಯರ್, ಜ್ಯೂನಿಯರ್ ಸೀನಿಯರ್ ಎಂಬ ತಾರತಮ್ಯವಿರಬಾರದು ಇದು ಸರಿಯಾದ ರೀತಿಯಲ್ಲಿ ಆಗಬೇಕು. ಇಂತಹ ಒಂದು ತಾರತಮ್ಯವನ್ನು ತಾವು ಸರಿ ಮಾಡಿದರೆ ಒಳ್ಳೆಯ ಸೇವೆಯನ್ನು ಕೊಡುವಂತಹ ವಿಚಾರವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಬಿ. ಮಾಲಕರೆಡ್ಡಿ : ಈಗಾಗಲೇ ನಾನು ಸಿಬ್ಬಂದಿಯ ಕೊರತೆಯ ಬಗ್ಗೆ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಗುರುಸ್ವಾಮಿಯವರೆ, ಈಗ ತಮಗೆ ಮಾತನಾಡಲು ಸಮಯವಿಲ್ಲ, ತಾವು ದಯವಿಟ್ಟು ಕ್ಷಮಿಸಬೇಕು. ತಾವು ಬೆಳಿಗ್ಗೆಯಿಂದ 50-60 ಕ್ಲಾರಿಫಿಕೇಷನ್‌ಗಳನ್ನು ಕೇಳಿದ್ದೀರಿ. ಬಹಳ ಮುಖ್ಯವಾದ ಸಭೆಯು 5 ಗಂಟೆಗೆ ಇದೆ.

ಶ್ರೀಎ.ಎಸ್. ಗುರುಸ್ವಾಮಿ(ಚಾಮುಂಡೇಶ್ವರಿ) :ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಈ ವಿಚಾರದ ಬಗ್ಗೆ ಉತ್ತರಿಸಬೇಕು. ಬಡಜನತೆಗಾಗಿ ಏನು ಆಸ್ವತ್ರೆಗಳಲ್ಲಿ ಈ ಗ್ಲೂಕೋಸ್‌ನ್ನು ತಯಾರು ಮಾಡುವುದಕ್ಕೋಸ್ಕರ ಹಿಂದೆ ಇದ್ದಂತಹ ಆರೋಗ್ಯಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರು ಏನು ಸ್ಟಾರ್ಟ್ ಮಾಡಿದ್ದರು ಅದನ್ನು ವಿನಾಃ ಕಾರಣ ಮುಚ್ಚಿ ಇವತ್ತು ಪ್ರೈವೇಟ್‌ನಲ್ಲಿ ಕೊಂಡುಕೊಳ್ಳುವಂತಹ ಪರಿಸ್ಥಿತಿಯನ್ನು ತಂದೊಡ್ಡಿದ್ದಾರೆ.ಇದು ಆಗಬಾರದಾಗಿತ್ತು ಇದರಿಂದ ಬಡ ಜನರಿಗೆ ಬಹಳ ತೊಂದರೆಯಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು, ದಯಮಾಡಿ ಈಗಲಾದರೂ ಕೂಡ ಪುನರ್ ಪರಿಶೀಲನೆ ಮಾಡಬೇ ಕೆಂದು ನನ್ನ ಮನವಿ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಿಬ್ಬಂದಿ ಕೊರತೆಯನ್ನು ನೀಗಿಸಲು ನೇಮಕಾತಿ ಪ್ರಾರಂಭವಾಗಿದೆ. ಈಗ 60ಪ್ರತಿ ಶತದಷ್ಟು ನೇಮಕಾತಿಗಳನ್ನು ಮುಗಿಸಲಾಗಿದೆ. ವೈದ್ಯರದು ಅಷ್ಟೇ ಉಳಿದಿದೆ. ಅದು ಕೂಡ ಒಂದೆರಡು ಮೂರು ವಾರಗಳಲ್ಲಿ ಆ ಪ್ರಕ್ರಿಯೆ ಕೂಡ ಪೂರ್ತಿಯಾಗುತ್ತದೆ. ಒಂದು ಮಹತ್ವದ ಪಾಲಿಸಿ ಮ್ಯಾಟರ್ಸ್‌ನ್ನು ಮಾನ್ಯ ಸದಸ್ಯರು ಹೇಳಿದರು. ವೈದ್ಯಕೀಯ ಇಲಾಖೆಯನ್ನು ಜಿಲ್ಲಾ ಪಂಚಾಯಿತಿಯಿಂದ ಬೇರ್ಪಡಿಸಬೇಕೆಂದು ಹೇಳಿದರು. ಆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಇದೊಂದು ಮೇಜರ್ ಪಾಲಿಸಿ ಡಿಸಿಷನ್ ಅದರ ಬಗ್ಗೆ ಸಮಾಲೋಚನೆ ಮಾಡಲಾಗುತ್ತದೆ. ಮಾನ್ಯ ಗುರುಸ್ವಾಮಿಯವರು ಗ್ಲುಕೋಸ್ ಘಟಕದ ಬಗ್ಗೆ ಹೇಳಿದರು. ಅದರಿಂದ ಏನೂ ತೊಂದರೆಯಾಗಿಲ್ಲ. ಪ್ರೈವೇಟ್‌ನವರಿಂದ ಕೊಂಡುಕೊಳ್ಳುವುದರಿಂದ ಉತ್ತಮವೇ ಆಗಿದೆ. ಯಾವ ರೋಗಿಗಳಿಗೂ ಏನೂ ಕೊರತೆಯಾಗಿಲ್ಲ. ನಾವೇ ತಯಾರು ಮಾಡಬೇಕಾದರೆ ಒಂದು ಬಾಟಲಿಗೆ 28 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಓಪನ್ ಮಾರ್ಕೆಟ್‌ನಲ್ಲಿ ಅದರ ಬೆಲೆ 13 ರೂಪಾಯಿ ಇದೆ. ನಾವು ತಯಾರು ಮಾಡಬೇಕಾದರೆ ಒಂದು ಬಾಟಲಿಗೆ 28 ರೂಪಾಯಿ ಖರ್ಚಾಗುತ್ತದೆ. ಅದರ ಬಗ್ಗೆ ಈ ಸದನದಲ್ಲಿ ಎರಡು ತಾಸು ಸಾಕಷ್ಟು ಚರ್ಚೆಯಾಗಿದೆ. ಪುನಃ ಅದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತಾರೋ ಗೊತ್ತಿಲ್ಲ. ಗ್ಲುಕೋಸ್‌ನ ಕೊರತೆಯಿಲ್ಲ. ರೋಗಿಗಳಿಗೆ ಅದರಿಂದ ಏನೂ ತೊಂದರೆಯಾಗಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸಣ್ಣ ಕ್ಲಾರಿಫಿಕೇಶನ್. ವೈದ್ಯರುಗಳು ಖಾಸಗಿ ನರ್ಸಿಂಗ್‌ಹೋಮ್‌ಗಳಲ್ಲಿ ಪ್ರಾಕ್ಟೀಸ್ ಮಾಡುವುದರಿಂದ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ದಯಮಾಡಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಪ್ರೈವೇಟ್ ಆಸ್ಪತ್ರೆಗಳಲ್ಲಿ ಪ್ರಾಕ್ಟೀಸ್ ಮಾಡುವುದನ್ನು ನಿಷೇಧ ಮಾಡಿದರೆ ಎಲ್ಲರೂ ಭೀತಿಪಟ್ಟು ಆಸ್ಪತ್ರೆಗಳಲ್ಲಿ ಸರಿಯಾಗಿ ರೋಗಿಗಳನ್ನು ನೋಡಿಕೊಳ್ಳುತ್ತಾರೆ. ಅದಕ್ಕೋಸ್ಕರ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಡಾಕ್ಟರುಗಳು ಪ್ರೈವೇಟ್‌ನಲ್ಲಿ ಕೆಲಸ ಮಾಡುವುದನ್ನು ನಿಷೇಧ ಮಾಡಲಿಕ್ಕೆ ಸುಗ್ರೀವಾಜ್ಞೆ ತಂದು, ಕಟ್ಟುನಿಟ್ಟಿನ ಆಜ್ಞೆಯನ್ನು ಮಾಡಲಿಕ್ಕೆ ತಾವು ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಸದಸ್ಯರು ಉತ್ತಮವಾದ ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಗಂಭೀರವಾಗಿ ಪರಿಗಣಿಸಲಾಗುವುದು.

ಅಭಿಯಾಚನೆ ಕ್ರಮಾಂಕ 50- ವೈದ್ಯಕೀಯ ಶಿಕ್ಷಣ

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 218,20,67,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆ ಯಲ್ಲಿ 250,00,00 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 51-ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 751,20,15,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 87,33,00,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 5, 6, 7, 8, 9, 10, 11, 12, 13, 14, 15, 16, 17, 18, 19, 20, 21, 22, 23, 24, 25, 26, 27, 28, 29, 30, 31, 32, 33, 34, 35, 36, 37, 38, 39, 40, 41, 42, 43, 44, 45 ಮತ್ತು 47, 48, 49 ಹಾಗೂ 52 ಎಲ್ಲಾ ಇಲಾಖೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ನಮೂದಿಸಿರುವ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ನಮೂದಿಸಿರುವ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು ಮತ್ತು
ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ
ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)